ಎ-330-93

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಸೀರ್ ಅಹಮದ್ ರವರ ನಿಯಮ 330ರ ಮೇರೆಗೆ ಸೂಚನೆ.

**ಪ್ರಶ್ನೆ:-**

ಸೈಯದ್ ಅಫಝುಲ್ ಷಾ ಮಕಾನ್ ವಕ್ಫ್ ಸಂಸ್ಥೆ, ಮೈಸೂರು ಇವರು ಜಮೈತ್-ಇ-ಖುದಾದ್ ಸಂಸ್ಥೆಯೊಂದಿಗೆ ಗುತ್ತಿಗೆ ಒಪ್ಪಂದ ಮಾಡಿಕೊಂಡಿದ್ದು, ಚಾರಿಟಬಲ್ ಟ್ರಸ್ಟ್ ಮೂಲಕ ದತ್ತಿ ಸಂಗ್ರಹಣೆ ಮಾಡಿ ಜಮೈತ್-ಇ-ಖುದಾದ್ ಸಂಸ್ಥೆಯು ಒಂದು ನಿರ್ಣಯವನ್ನು ಕೈಗೊಂಡು ಲಾಭ ರಹಿತ ಆಸ್ಪತ್ರೆ ಉದ್ದೇಶದಿಂದ ಆಸ್ಪತ್ರೆ ಟ್ರಸ್ಟ್‌ಗೆ ನಿರ್ವಹಣೆ ಮಾಡಲು ಅನುಮತಿ ನೀಡಲಾಗಿರುತ್ತದೆ. ಅದರಂತೆ ಸದರಿ ಆಸ್ಪತ್ರೆಯನ್ನು ಜಮೈತ್-ಇ-ಖುದಾದ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಎಂಬ ಹೆಸರಿನಲ್ಲಿ ನಿರ್ವಹಣೆಯನ್ನು ಮುಂದುವರೆಸಿ, ಸಾರ್ವಜನಿಕರಿಗೆ ಅನೇಕ ರೀತಿಯ ಉಚಿತ ಆರೋಗ್ಯ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದು, ಕೋವಿಡ್-19 ಸಂದರ್ಭದಲ್ಲಿ ಕರೋನಾ ರೋಗಿಗಳಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ಮತ್ತು ಬಡರೋಗಿಗಳಿಗೆ ಉಚಿತ ಡಯಾಲಿಸಿಸ್ ಚಿಕಿತ್ಸೆ ನೀಡುತ್ತಾ ಬರುತ್ತಿರುವ ಸದರಿ ಸಂಸ್ಥೆಯ ಬಿಬಿ ಆಯಿಷಾ ಮಿಲ್ಲಿ ಆಸ್ಪತ್ರೆ, ಮೈಸೂರು ಅನ್ನು ವಕ್ಫ್ ಮಂಡಳಿಯವರು ಏಕಾಏಕೀ ಲಾಕ್‌ಔಟ್ ಮಾಡಿ ಅದರಲ್ಲಿರುವ ಉಪಕರಣಗಳನ್ನು ನಾಶಪಡಿಸಿರುವುದರಿಂದ ಬಡರೋಗಿಗಳಿಗೆ ತೊಂದರೆಯಾಗಿರುವ ಕಾರಣ ಸಾರ್ವಜನಿಕರ ಹಿತದೃಷ್ಠಿಯಿಂದ ಲಾಕ್‌ಔಟ್ ತೆರವುಗೊಳಿಸಿ ಪುನಃ ಬಿಬಿ ಆಯಿಷಾ ಮಿಲ್ಲಿ ಆಸ್ಪತ್ರೆಯನ್ನು ಮುಂದುವರೆಸುವ ಕುರಿತು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:-**

ಸೈಯದ್ ಅಫ್‌ಜಲ್ ಷಾ ಮಕಾನ್ (ಸುನ್ನಿ), ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ಸಂಖ್ಯೆ ಎಂ.ಡಬ್ಲ್ಯೂ.ಬಿ/19(2)/1965, ದಿನಾಂಕ 1.4.1965 ರಲ್ಲಿ ಅಧಿಸೂಚಿತ ವಕ್ಫ್ ಸಂಸ್ಥೆಯಾಗಿದ್ದು ಮೈಸೂರು ನಗರದ ಸೈಟ್ ನಂ.242 (ಸರ್ವೆ ನಂ.242)ರಲ್ಲಿದ್ದು, 2 ಎಕರೆ 15 ಗುಂಟೆ ವಿಸ್ತೀರ್ಣವನ್ನು ಹೊಂದಿರುತ್ತದೆ.

ಸನ್ 1989ರಲ್ಲಿ ಜಮಿಯತ್-ಇ-ಖುದಾದಾದ್, ಮೈಸೂರು ರವರು ಸದರಿ ವಕ್ಫ್ ಸಂಸ್ಥೆಯೊಂದಿಗೆ ಬಿಬಿ ಆಯಿಷಾ ಆಸ್ಪತ್ರೆಯನ್ನು ತೆರೆಯಲು ಮಂಡಳಿಯ ಪೂರ್ವಾನುಮೋದನೆಯೊಂದಿಗೆ ಮೂವತ್ತು (30) ವರ್ಷಗಳ ಅವಧಿಗೆ ಗುತ್ತಿಗೆಗೆ ಪಡೆದಿರುತ್ತಾರೆ, ಈ ಕುರಿತು ದಿನಾಂಕ 21.3.1991 ರಂದು ಗುತ್ತಿಗೆ ಕರಾರನ್ನು ಸಹ ಮಾಡಿಕೊಂಡಿದ್ದು, ಸದರಿ ಗುತ್ತಿಗೆ ಕರಾರು ಉಪನೋಂದಣಾಧಿಕಾರಿಗಳು, ಮೈಸೂರು ಇಲ್ಲಿ ನೋಂದಾವಣೆಯಾಗಿರುತ್ತದೆ ಸದರಿ ಗುತ್ತಿಗೆ ಅವಧಿಯು ದಿನಾಂಕ 20.3.2021 ರಂದು ಕೊನೆಗೊಂಡಿರುತ್ತದೆ.

ಮುಂದುವರೆದು ಜಮಿಯತ್-ಇ-ಖುದಾದಾದ್ ಸಂಸ್ಥೆಯವರು ಸದರಿ ನೊಂದಾಯಿತ ಗುತ್ತಿಗೆ ಕರಾರನ್ನು ಉಲ್ಲಂಘಿಸಿ ಗುತ್ತಿಗೆಗೆ ಪಡೆದಿರುವ ವಕ್ಫ್ ಸಂಸ್ಥೆಯ ಮೂರನೇ ಮಹಡಿಯನ್ನು ವಕ್ಫ್ ಸಂಸ್ಥೆಯ ಮುತವಲ್ಲಿ ಅಥವಾ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅನುಮತಿ ಇಲ್ಲದೆಯೇ 'ಕಾವೇರಿ ನರ್ಸಿಂಗ್ ಕಾಲೇಜ್' ಹಾಗೂ ಮೈಸೂರು ಟಿಫನ್ಸ್ ಎಂಬ ಹೋಟೆಲ್‌ಗೆ ಸಬ್‌ಲೀಸ್ ಮಾಡಿರುತ್ತಾರೆ.

ಇದಲ್ಲದೆ, ಮಂಡಳಿಯ ಅನುಮೋದನೆಯಿಲ್ಲದೆಯೇ ಸದರಿ ಟ್ರಸ್ಟಿನವರು ದಿನಾಂಕ 5.3.2015ರಂದು ಸದರಿ ಟ್ರಸ್ಟ್ ಡೀಡ್‌ನ್ನು ತಿದ್ದುಪಡಿ ಮಾಡಿ ಶ್ರೀ ಇಕ್ಬಾಲ್ ಅಹ್ಮದ್ ರವರನ್ನು ಟ್ರಸ್ಟಿನಲ್ಲಿ ಸೇರಿಸಿಕೊಂಡು ಮುಂದೆ ಶ್ರೀ ಇಕ್ಬಾಲ್ ಅಹ್ಮದ್ ರವರು ಪುನ: ಮಂಡಳಿಯ ಅಥವಾ ಸಂಸ್ಥೆಯ ಮುತವಲ್ಲಿಯ ಅನುಮತಿ ಇಲ್ಲದೆಯೇ ಜಮಿಯತ್-ಇ-ಖುದಾದಾದ್ ಸಂಸ್ಥೆಯನ್ನು

.....2

ಜಮಿಯತ್-ಇ-ಖುದಾದಾದ್ ಹಾಸ್ಪಿಟಲ್ ಮತ್ತು ರಿಸರ್ಚ್ ಸೆಂಟರ್, ಮೈಸೂರು ಎಂದು, ಬೀಬಿ ಆಯಿಷಾ ಆಸ್ಪತ್ರೆಯು ಹೊಸ ಟ್ರಸ್ಟ್‌ನ ಆಸ್ತಿ ಎಂದು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ದಿನಾಂಕ 15.3.2017 ರಂದು ಕಾನೂನು ಬಾಹಿರವಾಗಿ ಹೊಸ ಟ್ರಸ್ಟ್‌ನ್ನು ನೋಂದಾಯಿಸಿ ವಕ್ಫ್ ಆಸ್ತಿಯನ್ನು ಪರಭಾರೆ ಮಾಡಿಕೊಂಡಿರುತ್ತಾರೆ.

ಮುಂದುವರೆದು, ದಿನಾಂಕ 16.5.2019ರಂದು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಆಡಳಿತಾಧಿಕಾರಿಗಳು ಈಗಾಗಲೇ ಜಮಿಯತ್-ಇ-ಖುದಾದಾದ್ ಸಂಸ್ಥೆಯವರಿಗೆ ನೀಡಲಾಗಿರುವ ಗುತ್ತಿಗೆಯನ್ನು ರದ್ದುಗೊಳಿಸಿ ನೂತನವಾಗಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ನಿರ್ದೇಶಿಸಿದ್ದರ ಮೇರೆಗೆ ಮೂಲ ಗುತ್ತಿಗೆದಾರ ಟ್ರಸ್ಟ್ ಆದ ಜಮಿಯತ್-ಇ-ಖುದಾದಾದ್ ಟ್ರಸ್ಟ್ ನವರು ದಿನಾಂಕ 31.5.2019ರಂದು ಒಂದು ನೋಂದಾಯಿತ ಸರಂಡರ್ ಆಫ್ ಲೀಸ್ ಮುಖೇನ, ದಿನಾಂಕ 21.3.1991ರ ಮೂಲ ಗುತ್ತಿಗೆ ಕರಾರಿನ ಹಕ್ಕು ಮತ್ತು ಬಾಧ್ಯತೆಗಳನ್ನು ರದ್ದುಗೊಳಿಸಿ ವಕ್ಫ್ ಸಂಸ್ಥೆಯ ಸುಪರ್ದಿಗೆ ಒಪ್ಪಿಸಿದ ನಂತರ ನೂತನ ಟೆಂಡರ್ ಪ್ರಕ್ರಿಯೆಯನ್ನು ವಕ್ಫ್ ಸಂಸ್ಥೆಯಿಂದ ಕೈಗೊಂಡು ಟೆಂಡರ್ ಪ್ರಕ್ರಿಯೆಯಲ್ಲಿ ಜಮಿಯತ್-ಇ-ಖುದಾದಾದ್ ಹಾಸ್ಪಿಟಲ್ ಮತ್ತು ರಿಸರ್ಚ್ ಸೆಂಟರ್ ಮೈಸೂರು ಟ್ರಸ್ಟ್‌ನ ಶ್ರೀ ಇಕ್ಬಾಲ್ ಅಹಮದ್ ರವರು ಭಾಗವಹಿಸಿ ಯಾವುದೇ ದರವನ್ನು ನಮೂದಿಸಿರುವುದಿಲ್ಲ.

ಮುಂದೆ ಈ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ನಮೂದಿಸಿದ್ದ ದರವೂ ಸಹ ಬಹಳ ಕಡಿಮೆ ಇದ್ದ ಕಾರಣ ಹಾಗೂ ಆಸ್ಪತ್ರೆಯ ಭೌತಿಕ ಸ್ವಾಧೀನವು ವಕ್ಫ್ ಸಂಸ್ಥೆಯಲ್ಲಿ ಇಲ್ಲದ ಕಾರಣ ದಿನಾಂಕ 24.12.2019ರಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು ರವರು ತಮ್ಮ ಕಛೇರಿಯಲ್ಲಿ ನಡೆಸಿದ ಸಭೆಯಲ್ಲಿ ಕಾನೂನು ಬಾಹಿರವಾಗಿ ಸ್ವಾಧೀನದಲ್ಲಿರುವ ನೂತನ ಟ್ರಸ್ಟ್‌ನ ಶ್ರೀ ಇಕ್ಬಾಲ್ ಅಹಮದ್ ರವರಿಗೆ ಸ್ವಾಧೀನ ನೀಡಲು ನಿರ್ದೇಶಿಸಲಾಗಿ ಸದರಿ ಇಕ್ಬಾಲ್ ಅಹಮದ್ ರವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ 53060 / 2019 ದಾವೆಯನ್ನು ಹೂಡಿರುತ್ತಾರೆ ಹಾಗೂ ಸದರಿ ದಾವೆ ಇತ್ಯರ್ಥಕ್ಕೆ ಬಾಕಿ ಇರುವಾಗಲೇ ಶ್ರೀ ಇಕ್ಬಾಲ್ ಅಹಮದ್‌ರವರು ಕಾನೂನು ಬಾಹಿರವಾಗಿ ವಿದ್ಯಾರಣ್ಯ ಮಲ್ಟಿ ಸ್ಪೆಷಾಲಿಟಿ ಹಾಸ್ಪಟಲ್ ಪ್ರೈವೇಟ್ ಲಿಮಿಟೆಡ್, ಜಯಲಕ್ಷ್ಮಿಪುರಮ್, ಮೈಸೂರು ಎಂಬ ಖಾಸಗಿ ಸಂಸ್ಥೆಯೊಂದಿಗೆ ಕೋವಿಡ್-19 ಆಸ್ಪತ್ರೆ ನಡೆಸಲು ಒಂದು ಒಡಂಬಡಿಕೆ ಮಾಡಿಕೊಂಡಿರುತ್ತಾರೆ.

ಸದರಿ ದಾವೆಯಲ್ಲಿ ಮಾನ್ಯ ಘನ ನ್ಯಾಯಾಲಯವು ವಿಚಾರಣೆ ನಡೆಸಿ ವಕ್ಫ್ ಸಂಸ್ಥೆ ಹಾಗೂ ಮಂಡಳಿಯೊಂದಿಗೆ ಪರಿಹರಿಸಿಕೊಳ್ಳಲು ನಿರ್ದೇಶಿಸಿರುತ್ತದೆ. ಅದರಂತೆ ಮೂಲ ಗುತ್ತಿಗೆದಾರ ಟ್ರಸ್ಟ್ ಆದ ಜಮಿಯತ್-ಇ-ಖುದಾದ್ ಟ್ರಸ್ಟ್ ಈಗಾಗಲೇ ಸರಂಡರ್ ಆಫ್ ಲೀಸ್ ಮಾಡಿದ್ದರಿಂದ ಸದರಿ ಆಸ್ಪತ್ರೆಯ ಭೌತಿಕ ಸ್ವಾಧೀನವನ್ನು ಕಾನೂನು ಬಾಹಿರವಾಗಿ ಸ್ವಾಧೀನ ಪಡೆದಿದ್ದ ಜಮಿಯತ್-ಇ-ಖುದಾದ್ ಹಾಸ್ಪಿಟಲ್ ಅಂಡ್ ರಿಸರ್ಚ್ ಸೆಂಟರ್ ಎಂಬ ನೂತನ ಟ್ರಸ್ಟ್‌ರವರಿಂದ ವಕ್ಫ್ ಸಂಸ್ಥೆಗೆ ಸ್ವಾಧೀನ ಪಡೆಯಬೇಕಾಗಿದ್ದರಿಂದ ಸದರಿ ಗುತ್ತಿಗೆಯ ಪ್ರದೇಶ ಕಟ್ಟಡ ಸಮೇತ ಸ್ಥಳೀಯ ಮಂಡಳಿಯು ಸ್ವಾಧೀನ ಪಡೆದು ವಕ್ಫ್ ಸಂಸ್ಥೆಯ ಸುಪರ್ದಿಗೆ ನೀಡಿರುತ್ತದೆ. ಇದನ್ನು ಪ್ರಶ್ನಿಸಿ ಶ್ರೀ ಇಕ್ಬಾಲ್ ಅಹ್ಮದ್ ರವರು ಪುನ: ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂಪಿ ನಂ.3074/2021ರಡಿಯಲ್ಲಿ ದಾವೆ ಹೂಡಿರುತ್ತಾರೆ. ಸದರಿ ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ.

**ಸಂಖ್ಯೆ: ಎಂಡಬ್ಲ್ಯೂಡಿ 132 ಎಲ್‌ಎಂಕ್ಯೂ 2021**

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು